ದಿನಾಂಕ **24-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಪಿಟಿಎನ್ ವಕೀಲರಿಂದ

ಮದುವೆಯಾದ ನಂತರ ಕವಿತಾಳದ ಗಂಡನ ಮನೆಯಲ್ಲಿ 3 ವರ್ಷಗಳವರೆಗೆ ಇದ್ದೆ. ನನ್ನ ಗಂಡನಿಗೆ ಸಹೋದರರು ಇರುವುದಿಲ್ಲ. ನನ್ನ ಗಂಡನಿಗೆ ತಂದೆ ಜೀವಂತ ಇರುತ್ತಾರೆ. ಎದುರುದಾರನ ತಂದೆ ಇತ್ತೀಚಿಗೆ ಮೃತಪಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎದುರುದಾರ ಲಾರಿ ಚಾಲಕನಾಗಿರುತ್ತಾನೆ. ಉಡುಪಿಯಲ್ಲಿ 6 ತಿಂಗಳು ಇದ್ದೆವು. ಕವಿತಾಳದಿಂದ ಉಡುಪಿಗೆ ಜೀವನೋಪಾಯಕ್ಕಾಗಿ ದುಡಿಯಲು ಹೋಗಿರುತ್ತೇವೆ. ಎದುರುದಾರನ ತಂದೆ ತಾಯಿಯನ್ನು ನಾವೇ ನೋಡಿಕೊಳ್ಳುತ್ತಿದ್ದೇವು. ನಾನು ಎದುರುದಾರನ ತಂದೆ ತಾಯಿಯನ್ನು ನೋಡಿಕೊಳ್ಳದೇ ಇರುವುದರಿಂದ ಮತ್ತು ದಿನಾಲು ನಾನು ಕಿರಿಕಿರಿ ಮಾಡುತ್ತಿದ್ದರಿಂದ ಎದುರುದಾರ ನನ್ನನ್ನು ಉಡುಪಿಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಉಡುಪಿಯಲ್ಲಿ ಎದುರುದಾರ ದಿನನಿತ್ಯ ಕೆಲಸ ಮಾಡುತ್ತಿದ್ದರು ನಾನೇ ಆತನಿಗೆ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರ ಚಾಲಕ ಕೆಲಸ ಮಾಡುವುದರಿಂದ ರಾತ್ರಿ ವೇಳೆ ಮನೆಗೆ ಬರುವುದು ಹೆಚ್ಚು ಕಡಿಮೆ ಆಗುತ್ತಿತ್ತು ಎಂದರೆ ಸರಿಯಲ್ಲ. ಮನೆಗೆ ರಾತ್ರಿ ಸರಿಯಾದ ಸಮಯಕ್ಕೆ ಬಾರದೇ ಇದುದ್ದರಿಂದ ನಾನು ಎದುರುದಾರನಿಗೆ ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರ ಕೆಲಸಕ್ಕೆ ಹೋದಾಗ ಆತನಿಗೆ ತಿಳಿಸದೇ ನನ್ನ ತಂದೆ ಮಾತು ಕೇಳಿ ಉಡುಪಿಯಿಂದ ತವರು ಮನೆಗೆ ನಾನೇ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಉಡುಪಿಯಲ್ಲಿನ ಮನೆಯಿಂದ ತವರು ಮನೆಗೆ ಬಂದ ನಂತರ ಎದುರುದಾರ ನನ್ನ ತಂದೆಗೆ ಫೋನ್ ಕರೆ ಮಾಡಿದಾಗ ನನ್ನ ತಂದೆ ಎದುರುದಾರನಿಗೆ ಬೈದಿರುತ್ತಾನೆ ಎಂದರೆ ಸರಿಯಲ್ಲ. ನಾನು ಈಗ ತವರು ಮನೆಯಲ್ಲಿ ಕಳೆದ 14 ವರ್ಷಗಳಿಂದ ವಾಸವಿದ್ದೇನೆ. ನಾನು ತವರು ಮನೆಗೆ ಬಂದ ವಿಷಯ ತಿಳಿದ ನಂತರ ಎದುರುದಾರ ನನ್ನನ್ನು ಕರೆಯಲು ನನ್ನ ತವರು ಮನೆಗೆ ಬಂದಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೋದರು ಸಹ ಎದುರುದಾರ ನನ್ನನ್ನು ಮನೆ ಒಳಗೆ ಕರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಎದುರುದಾರನ ಮನೆಗೆ ಹೋಗಿರುತ್ತೀಯಾ ಎಂಬ ಪ್ರಶ್ನೆಗೆ ಸಾಕ್ಷಿ ಅವಗವಾಗ ಎದುರುದಾರನ ಮನೆಗೆ ಹೋಗಿರುತ್ತೇನೆ, ಹೋದಾಗ ನನ್ನನ್ನು ಮನೆ ಒಳಗೆ ಕರೆದುಕೊಂಡಿರುವುದಿಲ್ಲ. ಸದರಿ ಗಂಡನ ಮನೆಗೆ ಹೋದ ದಿನಾಂಕ, ತಿಂಗಳು, ವರ್ಷ ನಿಖರವಾಗಿ ಹೇಳಲು ಬರುವುದಿಲ್ಲ. ಎದುರುದಾರನ ಮನೆಗೆ ಆಗಾಗ ಹೋಗಿ ಬಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ಮತ್ತು ಆತನ ತಂದೆ ತಾಯಿ

ನನ್ನನ್ನು ಕರೆದುಕೊಂಡು ಹೋಗಲು ಬಂದಿದ್ದರು ಸಹ ನಾನು ಅವರನ್ನು ಬೈದು ಕಳಿಸಿರುತ್ತೇನೆ ಎಂದರೆ ಸರಿಯಲ್ಲ.

ಶಾಖಪೂರು ಗ್ರಾಮದಲ್ಲಿ ಸ.ನಂ.5 ರಲ್ಲಿ 1 ಎಕರೆ 29 ಗುಂಟೆ ಇರುತ್ತದೆ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನನ್ನ ತಂದೆ ತಾಯಿ ಎದುರುದಾರನಿಗೆ ಕೊಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಎದುರುದಾರನ ಹೆಸರಿಗೆ ಜಮೀನು ಖರೀದಿಸಿದಂತೆ ದಾಖಲಾತಿಗಳು ಇವೆ ಎಂದರೆ ಸಾಕ್ಷಿ ಎದುರುದಾರನ ಹೆಸರಿಗೆ ಖರೀದಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರ ಹುಸೇನಪುರ ಗ್ರಾಮದ 8 ಎಕರೆ ಜಮೀನನ್ನು ಮಾರಾಟ ಮಾಡಿ ಶಾಖಪೂರದಲ್ಲಿ 1 ಎಕರೆ 29 ಗುಂಟೆ ಖರೀದಿ ಮಾಡಿರುತ್ತಾನೇ ಎಂದರೆ ಸರಿಯಲ್ಲ. ಪ್ರಭರಾಯ ತಂದೆ ಬಾಲಪ್ಪ ಇವರಿಂದ ಎದುರುದಾರ 1 ಎಕರೆ 29 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾನೆ ಎಂದರೆ ಸಾಕ್ಷಿ ಸದರಿ ಪ್ರಭುರಾಯ ಇವರಿಂದ ನನ್ನ ತಂದೆ ಎದುರುದಾರನ ಹೆಸರಿಗೆ ಖರೀದಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನನ್ನ ತಂದೆ ಕೊಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಖರೀದಿ ಮಾಡಿದ ನಂತರ 4-5 ವರ್ಷ ಎದುರುದಾರ ಸಾಗುವಳಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಾಗುವಳಿ ಮಾಡಿ ಎದುರುದಾರನ ತಂದೆ ತಾಯಿಗೆ ಜಮೀನಿನಲ್ಲಿ ಬೆಳೆದ ಭತ್ತ ಮತ್ತು ಭತ್ತದಿಂದ ಬಂದ ಹಣ ಸಹ ನಾನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಂದೆ ಎದುರುದಾರನನ್ನು ಹೆದರಿಸಿ ಸದರಿ ಜಮೀನಿನ ಕಬ್ಜೆಯನ್ನು ಕಸಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2018-19 ರಲ್ಲಿ ಸದರಿ ಜಮೀನನ್ನು ಎದುರುದಾರನ ಖೊಟ್ಟಿ ಸಹಿ ಮಾಡಿ ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹೆಸರಿಗೆ ಮಾಡಿಸಿರುತ್ತಾನೆ ಎಂದು ನುಡಿಯುತ್ತಾರೆ. ಎದುರುದಾರ ನನ್ನ ಹೆಸರಿಗೆ ಮಾಡಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.